# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ | : | 127 (1137) |
| 2 | ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್ ಎಸ್.<br>(ವಿಧಾನಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 13.03.2026 |
| 4 | ಉತ್ತರಿಸುವ ಸಚಿವರು | : | ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು. |

****

| | ಪ್ರಶ್ನೆ | ಉತ್ತರ |
|---|---|---|
| (ಅ) | ಶಾಸಕರ ಪ್ರದೇಶ ಅಭಿವೃದ್ಧಿ ನಿಧಿಯಲ್ಲಿ ಎರಡು ವರ್ಷಗಳಲ್ಲಿ ಪ್ರಾರಂಭವಾಗದ ಕಾಮಗಾರಿಗಳ ನಿಧಿಯನ್ನು ಮರಳಿ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಸರ್ಕಾರದ ಮಾರ್ಗಸೂಚಿಯ ಸಂಪೂರ್ಣ ಮಾಹಿತಿ ನೀಡುವುದು. | ಹೌದು<br><br>ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಪರಿಷ್ಕೃತ ಮಾರ್ಗಸೂಚಿ-2014ರ ಕಂಡಿಕೆ-4.1 ರಲ್ಲಿ ಈ ಕೆಳಕಂಡಂತಿರುತ್ತದೆ:-<br><br>"ಯೋಜನಾ ಇಲಾಖೆಯು ನೋಡಲ್ ಜಿಲ್ಲಾಧಿಕಾರಿಗಳಿಗೆ ಅನುಷ್ಠಾನದಲ್ಲಿರುವ ಕಾಮಗಾರಿಗಳ ವಾಸ್ತವಿಕ ಮತ್ತು ಹಣಕಾಸು ಪ್ರಗತಿಯ ಆಧಾರದ ಮೇಲೆ ಹಾಗೂ ಕಾಮಗಾರಿಗಳಿಗೆ ಇನ್ನೂ ಹೆಚ್ಚಿನ ನಿಧಿಗಳ ಅಗತ್ಯತೆಯ ಆಧಾರದ ಮೇಲೆ ನಿಧಿಯನ್ನು ವರ್ಷಕ್ಕೆ ಎರಡು ಕಂತುಗಳಲ್ಲಿ ಬಿಡುಗಡೆ ಮಾಡತಕ್ಕದ್ದು. ನಿರ್ದಿಷ್ಟ ವರ್ಷದಲ್ಲಿ ಬಿಡುಗಡೆಯಾದ ನಿಧಿಗಳ ಪೈಕಿ ಬಳಕೆಯಾಗದೆ ಉಳಿದ ಹಣ ಜಿಲ್ಲಾಧಿಕಾರಿಗಳ ಬಳಿ ಇದ್ದರೆ, ಅದನ್ನು ಮುಂದಿನ ವರ್ಷಕ್ಕೆ ಮಾತ್ರ ಉಪಯೋಗಿಸಬಹುದಾಗಿದೆ. ಆ ಮೊತ್ತವು ಮುಂದಿನ ವರ್ಷದ ಕೊನೆಯಲ್ಲಿ ಖರ್ಚಾಗದೆ ಉಳಿದರೆ ಆ ಮೊತ್ತವನ್ನು ರದ್ದುಪಡಿಸಲಾಗುವುದು. ಅಲ್ಲದೆ, ಆ ವರ್ಷದಲ್ಲಿ ನಿಧಿಗಳಲ್ಲಿ ಕ್ಲೇಮು ಮಾಡದಿದ್ದಲ್ಲಿ ಹಣಕಾಸು ವರ್ಷದ ಕೊನೆಯಲ್ಲಿ ಹಂಚಿಕೆಯನ್ನು ರದ್ದುಪಡಿಸತಕ್ಕದ್ದು" ಎಂದಿರುತ್ತದೆ.<br><br>ಆದ್ದರಿಂದ, ಕಳೆದ ಎರಡು ವರ್ಷಕ್ಕೂ ಮೇಲ್ಪಟ್ಟು ಪ್ರಾರಂಭವಾಗದಿರುವ ಕಾಮಗಾರಿಗಳನ್ನು ಆರಂಭಿಸಲು ಅವಕಾಶವಿಲ್ಲ. ಈ ಬಗ್ಗೆ ಮಾನ್ಯ ಸಭಾಧ್ಯಕ್ಷರು ಮತ್ತು ಮಾನ್ಯ ಸಭಾಪತಿಯವರ ಅಧ್ಯಕ್ಷತೆಗಳಲ್ಲಿ ನಡೆದ ಸಭೆಯ ನಿರ್ಣಯದಂತೆ ಹಾಗೂ ಆರ್ಥಿಕ ಇಲಾಖೆಯ ಸಹಮತಿಯನುಸಾರ ಪ್ರಾರಂಭವಾಗದೇ ಇರುವ ಕಾಮಗಾರಿಗಳ ಅನುದಾನವನ್ನು ರಾಷ್ಟ್ರೀಕೃತ ಬ್ಯಾಂಕ್ ಖಾತೆಗೆ ಜಮ ಮಾಡಬೇಕಾಗಿರುತ್ತದೆ. |

...2

<table>
<tr><th></th><th>ಪ್ರಶ್ನೆ</th><th>ಉತ್ತರ</th></tr>
<tr><td>(ಆ)</td><td>ಸರ್ಕಾರ ಶಾಸಕರ ಪ್ರದೇಶ ಅಭಿವೃದ್ಧಿ ನಿಧಿಯನ್ನು ನಿಗಧಿತ ಸಮಯಕ್ಕೆ ನೀಡದ ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಶಾಸಕರು ಶಿಫಾರಸ್ಸು ಮಾಡಿದ ಕಾಮಗಾರಿಗಳ ಅನುಷ್ಠಾನದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಹಾಗೂ ಅನುಷ್ಠಾನದ ಏಜೆನ್ಸಿಗಳಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳು ಯಾವುವು ಸಂಪೂರ್ಣ ಮಾಹಿತಿ ನೀಡುವುದು.</td><td>ಇಲ್ಲ.<br><br>ಆರ್ಥಿಕ ಇಲಾಖೆಯ ಅಧಿಕಾರ ಪ್ರತ್ಯಾಯೋಜನೆಯನ್ವಯ, ಪ್ರಸಕ್ತ ಸಾಲಿನಲ್ಲಿ ದಿನಾಂಕ:13.06.2025 ರಂದು ಮೊದಲನೇ ಕಂತು, ದಿನಾಂಕ:08.08.2025 ರಂದು ಎರಡನೇ ಕಂತು ಮತ್ತು ದಿನಾಂಕ: 14.01.2026 ರಂದು ಮೂರು ಮತ್ತು ನಾಲ್ಕು ಕಂತಿನ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.<br><br>ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಅನುಷ್ಠಾನಕ್ಕಾಗಿ, ಮಾನ್ಯ ಶಾಸಕರುಗಳ ಪ್ರಸ್ತಾವನೆಯನುಸಾರ ಜಿಲ್ಲಾಧಿಕಾರಿ/ಅಪರ ಜಿಲ್ಲಾಧಿಕಾರಿ ಅಥವಾ ಉಪವಿಭಾಗಾಧಿಕಾರಿ-ಇವರುಗಳ ಹಂತದಲ್ಲಿ ಕಾಮಗಾರಿಗಳ ಅನುಷ್ಠಾನಕ್ಕೆ ಅನುಮತಿ ನೀಡಲಾಗಿರುವ ಹಿನ್ನಲೆಯಲ್ಲಿ ಕಾಮಗಾರಿಗಳ ಅನುಷ್ಠಾನದಲ್ಲಿ ವಿಳಂಬವಾಗುವುದಿಲ್ಲ.<br><br>ಮುಂದುವರೆದು, ಹಾಸನ ಜಿಲ್ಲೆಯಲ್ಲಿ ಕಾಮಗಾರಿಗಳ ಅನುಷ್ಠಾನವು ವಿಳಂಬವಾಗುತ್ತಿದೆ ಎಂಬ ದೂರಿನನ್ವಯ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ಪಿಡಿಎಸ್ 170 ಕೆ ಎಲ್ ಎಸ್ 2025, ದಿನಾಂಕ:11.02.2026 ರಂದು ಕಾಮಗಾರಿಗಳ ಅನುಷ್ಠಾನಕ್ಕೆ ಕಾಲಮಿತಿಯನ್ನು ನಿಗದಿಪಡಿಸಲಾಗಿದೆ.<br><br>ಕಾಲಮಿತಿ ನಿಗದಿಯಾಗಿರುವ ಅಧಿಕೃತ ಜ್ಞಾಪನವನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.</td></tr>
<tr><td>(ಇ)</td><td>ಶಾಸಕರ ಪ್ರದೇಶ ಅಭಿವೃದ್ಧಿ ನಿಧಿಯಲ್ಲಿ ಕಾಮಗಾರಿಗಳು ಅನುಷ್ಠಾನಕ್ಕೆ ವಿಧಿಸುವ ತೆರಿಗೆ ಎಷ್ಟು; ಶಾಸಕರು ಕಾಮಗಾರಿಗಳ ಅನುಷ್ಠಾನಕ್ಕೆ ವಹಿಸಿದ ಏಜೆನ್ಸಿಗಳಲ್ಲಿ ತೆರಿಗೆ ಹೆಸರಿನಲ್ಲಿ ನಿಧಿಯನ್ನು ವಿಪರೀತ ಕಡಿತಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು; ಸಂಪೂರ್ಣ ಮಾಹಿತಿ ನೀಡುವುದು.</td><td>ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಕಾಮಗಾರಿಗಳ ಅನುಷ್ಠಾನಕ್ಕೆ ಯಾವುದೇ ತೆರಿಗೆಗಳನ್ನು ವಿಧಿಸುವುದಿಲ್ಲ.<br><br>ಆದರೆ, ಈ ಕೆಲ್ಯಾಡ್ಸ್ ಯೋಜನೆಯಡಿ ಪ್ರಸ್ತಾಪಿತ ಕಾಮಗಾರಿಗಳನ್ನು ನಿಗದಿತ ಅನುಷ್ಠಾನ ಏಜೆನ್ಸಿಗಳ ಮುಖೇನ ಅನುಷ್ಠಾನಗೊಳಿಸಲಾಗುತ್ತಿರುತ್ತದೆ.<br><br>ಸದರಿ ಅನುಷ್ಠಾನ ಏಜೆನ್ಸಿಗಳು ಆದಾಯ ತೆರಿಗೆ ಕಾಯ್ದೆಯನ್ವಯ ಈ ಕೆಳಕಂಡಂತೆ ತೆರಿಗೆಯನ್ನು ಕಟಾವಣೆ ಮಾಡಲಾಗುತ್ತಿದೆ:-<br><br>
<table>
<tr><th>ಕ್ರ ಸಂ</th><th>ವಿವರ</th><th>ಶೇಕಡಾವಾರು</th></tr>
<tr><td>1</td><td>ಸಂಸ್ಥೆಯಾಗಿದ್ದರೆ ಬಿಲ್ಲಿನ</td><td>2%</td></tr>
<tr><td>2</td><td>ವ್ಯಕ್ತಿಗತವಾಗಿದ್ದರೆ</td><td>1%</td></tr>
<tr><td>3</td><td>ಸೆಸ್</td><td>1%</td></tr>
<tr><td>4</td><td>ಸಿ.ಜಿ.ಎಸ್.ಟಿ</td><td>1%</td></tr>
<tr><td>5</td><td>ಸಿ.ಇ.ಬಿ.ಎಫ್.</td><td>1%</td></tr>
<tr><td>6</td><td>ರಾಜ ಧನ ಬಿಲ್ಲಿನಂತೆ</td><td>-</td></tr>
<tr><td>7</td><td>3ನೇ ವ್ಯಕ್ತಿ ತಪಾಸಣೆ ವೆಚ್ಚ</td><td>-</td></tr>
<tr><td>8</td><td>ಎಫ್.ಎಸ್.ಡಿ</td><td>5%</td></tr>
<tr><td>9</td><td>ದಂಡವಿದ್ದರೆ ಕಟಾವಣೆ ಮಾಡಿ ಸಂಬಂಧಪಟ್ಟ ಸಂಸ್ಥೆಗಳಿಗೆ ಜಮ ಮಾಡಲಾಗುತ್ತದೆ</td><td>-</td></tr>
</table>
<br>ಮೇಲ್ಕಂಡ ಅಂಶಗಳೊಂದಿಗೆ, Royalty ಮತ್ತು 1995ರ PWD Code ಪ್ರಕಾರ ಹಾಗೂ ಸರ್ಕಾರ ವಿಧಿಸುವ GST ಗಳನ್ವಯ ತೆರಿಗೆಯನ್ನು ಕಡಿತಗೊಳಿಸಲಾಗುತ್ತಿದೆ.</td></tr>
</table>

ಸಂಖ್ಯೆ:ಪಿಡಿಎಸ್-ಕೆಎಲ್ಎಸ್/27/2026

(ಡಿ. ಸುಧಾಕರ್)
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖಾ ಸಚಿವರು.

ಅನುಬಂಧ - 1

**ಸಂಖ್ಯೆ:** ಪಿಡಿಎಸ್ 170 ಕೆಎಲ್ಎಸ್ 2025

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ,
ಡಾ|| ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:11.02.2026.

**ಅಧಿಕೃತ ಜ್ಞಾಪನ**

**ವಿಷಯ:** ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಮಾರ್ಗಸೂಚಿ ಮೇ-2014 ಕ್ಕೆ ಸೇರ್ಪಡೆ ಮಾಡುವ ಬಗ್ಗೆ.

****

ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಪ್ರಸ್ತಾಪಿತ ಕಾಮಗಾರಿಗಳನ್ನು ನಿಗದಿತ ಕಾಲಮಿತಿಯಲ್ಲಿ ಅನುಷ್ಠಾನಗೊಳಿಸಲು, ಕೆಲ್ಯಾಡ್ಸ್ ಪರಿಷ್ಕೃತ ಮಾರ್ಗಸೂಚಿ, ಮೇ- 2014 ಕ್ಕೆ ಈ ಕೆಳಕಂಡ ಅಂಶವನ್ನು ಸೇರ್ಪಡೆ ಮಾಡಲಾಗಿದೆ.

| ಕ್ರ ಸಂ | ಹಂತ/ಪ್ರಕ್ರಿಯೆ | ಕಾಲಾವಕಾಶದ ಮಿತಿ (Working Days) |
|---|---|---|
| 1 | ಮಾನ್ಯ ಶಾಸಕರು, ಆರ್ಥಿಕ ವರ್ಷ ಪ್ರಾರಂಭಗೊಂಡ 30 ದಿನಗಳೊಳಗಾಗಿ ಜಿಲ್ಲಾಧಿಕಾರಿ/ ಉಪವಿಭಾಗಾಧಿಕಾರಿಗಳಿಗೆ ರೂ.2.00 ಕೋಟಿಗಳ ಮೊತ್ತಕ್ಕೆ ಕಾಮಗಾರಿಗಳ ಕ್ರಿಯಾ ಯೋಜನೆ/ಪ್ರಸ್ತಾವನೆ ಸಲ್ಲಿಸುವುದು. | ಕಾರ್ಯನಿರತ 30 ದಿನಗಳು (30ನೇ ಏಪ್ರಿಲ್) |
| 2 | ಸ್ವೀಕೃತ ಕ್ರಿಯಾ ಯೋಜನೆಯ ಕಾಮಗಾರಿಗಳಿಗೆ ಜಿಲ್ಲಾಧಿಕಾರಿ/ಉಪವಿಭಾಗಾಧಿಕಾರಿಗಳು ಅನುಮೋದನೆ ನೀಡಿ, ಸಂಬಂಧಪಟ್ಟ EE/AEE/ಅನುಷ್ಠಾನಾಧಿಕಾರಿಗಳಿಗೆ ಅನುಮೋದಿತ ಅಂದಾಜು ಪಟ್ಟಿ ಸಲ್ಲಿಸಲು ಸೂಚಿಸಿ, ರವಾನೆ ಮಾಡುವುದು.(ಬಿಡಿ ಬಿಡಿಯಾಗಿ ಸ್ವೀಕೃತಗೊಂಡಲ್ಲಿ 10 ದಿನಗಳು ಮಾತ್ರ) | ಕಾರ್ಯನಿರತ 30 ದಿನಗಳು |
| 3 | ಸ್ವೀಕೃತ ಕ್ರಿಯಾ ಯೋಜನೆಗೆ ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು ಅಂದಾಜು ಪಟ್ಟಿ ತಯಾರಿಸಿ, ತಾಂತ್ರಿಕ ಅನುಮೋದನೆಗೆ EE/AEE ಗೆ ಸಲ್ಲಿಸುವುದು. | ಕಾರ್ಯನಿರತ 30 ದಿನಗಳು |
| 4 | ಅಂದಾಜು ಪಟ್ಟಿ ಸಿದ್ಧವಾದ ಪ್ರಸ್ತಾವನೆಗಳಿಗೆ EE/AEE ಗಳು ತಾಂತ್ರಿಕ ಅನುಮೋದನೆಗೆ ನೀಡುವುದು. | ಕಾರ್ಯನಿರತ 10 ದಿನಗಳು |
| 5 | ಅನುಷ್ಠಾನಾಧಿಕಾರಿಗಳಿಂದ ಸ್ವೀಕೃತಗೊಂಡ ಅಂದಾಜು ಪಟ್ಟಿ (Estimate) ಗೆ ಜಿಲ್ಲಾಧಿಕಾರಿ/ಉಪ ವಿಭಾಗಾಧಿಕಾರಿಗಳು ಆಡಳಿತಾತ್ಮಕ ಅನುಮೋದನೆ ನೀಡಿ, ಶೇ 75 ರಷ್ಟು ಅನುದಾನ ಬಿಡುಗಡೆ ಮಾಡುವುದು. | ಕಾರ್ಯನಿರತ 15 ದಿನಗಳು |
| 6 | ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು (EE/AEE) ಕಾಮಗಾರಿ ಪ್ರಾರಂಭಿಸಿ ಮುಕ್ತಾಯ ಮಾಡುವುದು (ಅಂದಾಜು ಮೊತ್ತ ರೂ.5.00 ಲಕ್ಷಗಳ ಕಾಮಗಾರಿಗಳು) ಹಾಗೂ ಅಂದಾಜು ಮೊತ್ತ ರೂ.5.00 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯಿಂದ ನಿಗದಿಪಡಿಸಿರುವ ಕಾಲಮಿತಿಯಲ್ಲಿ ಅನುಷ್ಠಾನಗೊಳಿಸುವುದು. (ಟೆಂಡರ್ ನಿಯಮಗಳಂತೆ ಹಾಗೂ ಅಂದಾಜು ಮೊತ್ತ ಆಧರಿಸಿ) | ಕಾರ್ಯನಿರತ 90 ದಿನಗಳು |

..2

| ಕ್ರ ಸಂ | ಹಂತ/ಪ್ರಕ್ರಿಯೆ | ಕಾಲಾವಕಾಶದ ಮಿತಿ (Working Days) |
|---|---|---|
| 7 | ಮೂರನೇ ವ್ಯಕ್ತಿ ತಪಾಸಣೆ ಪೂರ್ಣಗೊಳಿಸಿ ಅಂತಿಮ ಬಿಲ್ಲಿಗೆ ಪ್ರಸ್ತಾವನೆ ಸಲ್ಲಿಸುವುದು ಹಾಗೂ ಉಳಿಕೆ ಶೇ 25 ರಷ್ಟು ಅನುದಾನ ಬಿಡುಗಡೆ ಮಾಡುವುದು. | ಕಾರ್ಯನಿರತ 30 ದಿನಗಳು |
| 8 | ಕಾಮಗಾರಿ ಮುಕ್ತಾಯ ಮಾಡಿ ವರದಿ ಸಲ್ಲಿಸುವುದು (ಅನುಷ್ಠಾನ ಏಜನ್ಸಿಗಳು) (worksoft ತಂತ್ರಾಂಶದಲ್ಲಿ ಇಂಧೀಕರಿಸುವುದು). | ಕಾರ್ಯನಿರತ 5 ದಿನಗಳು |

[ಮಾನ್ಯ ಯೋಜನಾ ಸಚಿವರಿಂದ
ಅನುಮೋದಿಸಲ್ಪಟ್ಟಿದೆ]

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಡಿ. ಚಂದ್ರಶೇಖರಯ್ಯ)**
ನಿರ್ದೇಶಕರು
ಪ್ರದೇಶಾಭಿವೃದ್ಧಿ ಮಂಡಳಿ ವಿಭಾಗ,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಎ ಮತ್ತು ಇ/ಲೆಕ್ಕ ಪರಿಶೋಧನೆ-1 ಮತ್ತು 2), ಕರ್ನಾಟಕ ಬೆಂಗಳೂರು-560001.
2. ಎಲ್ಲಾ ಜಿಲ್ಲಾಧಿಕಾರಿ, ಅಪರ ಜಿಲ್ಲಾಧಿಕಾರಿ ಮತ್ತು ಸಂಬಂಧಪಟ್ಟ ಉಪವಿಭಾಗಾಧಿಕಾರಿಗಳಿಗೆ (ಜಿಲ್ಲಾಧಿಕಾರಿಗಳ ಕಚೇರಿ ಮುಖೇನ).
3. ಮಾನ್ಯ ಯೋಜನಾ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು
4. ಸರ್ಕಾರದ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
5. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.